Kan-1
2010-2013

Reg. No. 

**BBMKAL 103**

# ಗುಣಾಂಕ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಬಿ.ಎಂ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2013
## (ಗುಣಾಂಕ ಆಧಾರಿತ ಸೆಮಿಸ್ಟರ್ ಪದ್ಧತಿ)
## ಕನ್ನಡ
## (2013-2014 Batch and Onwards) (NS)
## ಕನ್ನಡ ಭಾಷಾ ಪತ್ರಿಕೆ - I

ಸಮಯ : 3 ಗಂಟೆಗಳು

ಗರಿಷ್ಠಾಂಕಗಳು : 80

ಭಾಗ - ೧

I. ಅ) ಒಂದಕ್ಕೆ ಉತ್ತರಿಸಿರಿ : (1×8=8)

1) ಯುದ್ಧದ ಸುದ್ದಿಯನ್ನು ಸೇನಾ ಮುಖ್ಯರು ಘೋಷಿಸಿದೊಡನೆ ಸೈನಿಕರು ಅದಕ್ಕೆ ಪ್ರತಿಕ್ರಿಯಿಸಿದ ಬಗೆ ಹೇಗೆ ? ವಿವರಿಸಿರಿ.

2) ವಸಿಷ್ಠ-ವಿಶ್ವಾಮಿತ್ರರ ವಾಗ್ವಾದದ ಸನ್ನಿವೇಶವನ್ನು ವಿವರಿಸಿರಿ.

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) 'ಬಾಳೊಂದು ವಿಜಯದ ಬೀಡು' ಪದ್ಯದ ಮುಕ್ತಕಗಳಲ್ಲಿ ವ್ಯಕ್ತವಾಗುವ ತತ್ವ ವಿಚಾರಗಳನ್ನು ವಿವರಿಸಿರಿ.

2) ಪುರಂದರ ದಾಸರ ಕೀರ್ತನೆಗಳ ಆಶಯವನ್ನು ವಿವರಿಸಿರಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2×3=6)

1) ಹರಿಹರ ಮಹತ್ವ 2) ಭಗೀರಥ 3) ಇಂದ್ರಚಾಪ

II. ಒಂದು ಪದ್ಯದ ಸಂದರ್ಭದೊಂದಿಗೆ ಭಾವಾರ್ಥವನ್ನು ಬರೆಯಿರಿ : (1×5=5)

1) ಉರಿಮುಟ್ಟಿದರಳೆಯಂತಂ
ಬರ ಮುರಿದತ್ತ ಜನಪದ ವಿಷ್ಟರದೆಸಳಿಂ
ದರೆ ಸೀದುವಖಿಳ ದಿಗ್ವರ
ದ ರದಂಗಳ್ ಕರಮೆ ಕರಿಪ್ಪಗಾಱುದುವಾಗಳ್

Shri Dharmasthala Manjunatheshwara
College of Business Management Library
MANGALORE - 575 003

2) ಈ ಡಿಸೈನಿನ ಹಾಗೆ ಆದಿಲ್ಲ
ಜ್ಯಾಮಿತಿಯ ಗಡಸು ಜಟಿಲ ಸೂತ್ರಗಳಿಗೆಲ್ಲ
ದಕ್ಕಿರುವುದಿಲ್ಲ ಮಿಗಿಲರ್ಥ
ಮೃದು ಬೆರಳ ಪರಿಹಾರ
ಕಾಲೇಜು ಕಲಿಯದ ಸುಮಂಗಲೆ
ರಂಗೋಲಿ ನೆವದಿಂದ ನೀಡಿದ್ದಾಳೆ
ಪ್ರತಿ ದಿನವೂ ಸೂತ್ರಗಳಿಗಾಕಾರ

'ಎರಡು ಸಾಲುಗಳಿಗೆ ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿರಿ. (2x3=6)

1) ಒಂದಕ್ಕೆ ಹಿತ ನುಡಿಯ ಪಕ್ಷ

2) ಅಸ್ಥಿರದ ದೇಹವನು ನೆಚ್ಚಿ ನೀ ಕೆಡಬೇಡ

3) ಕ್ಯೂ ಬೆಳೆಯುತ್ತೆ ಹೆಜ್ಜೆ ಹಾಕೋ ಬೇಗ.

III. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (5x1=5)

1) ವೇಟೀವಾಟು ಎಂದರೇನು ?

2) ಪುರಂದರ ದಾಸರ ಅಂಕಿತನಾಮವೇನು ?

3) ಶುನಶ್ಯೇಪನು ಯಾರ ಸುತ ?

4) ಕವಿ ಪಂಪನ ತಂದೆಯ ಹೆಸರೇನು ?

5) ಕವಿ ಅಡಿಗರ ಹುಟ್ಟೂರು ಯಾವುದು ?

## ಭಾಗ - ೨

## ಗದ್ಯ

IV ಅ) ಒಂದಕ್ಕೆ ಉತ್ತರಿಸಿರಿ : (1x8=8)

1) ದೇವರೇ ಬರಲಿಲ್ಲ – ಕಥೆಯಲ್ಲಿ ಬರುವ ನಳಿನಾ ಹಾಗೂ ವಿಮಲಗಳ ಬದುಕಿನ ನೋವುಗಳನ್ನು ಚಿತ್ರಿಸಿರಿ.

2) ಪ್ರಭು ಸಮ್ಮಿತ ಕಥೆಯ ಮಾನವೀಯ ಸಂಬಂಧವನ್ನು ವಿವರಿಸಿರಿ.

ಆ) ಒಂದಕ್ಕೆ ಉತ್ತರಿಸಿರಿ : (1x8=8)

1) ವಿ.ಸೀ. ಯವರು ಸಾಹಿತ್ಯ ಪರರೇ ಹೊರತು ಶಾಸ್ತ್ರ ಪರರಲ್ಲ. ಈ ಹೇಳಿಕೆಯನ್ನು ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿರಿ.

2) 'ಹುಲಿ ಸವಾರಿ' ಪ್ರಬಂಧದ ಆಶಯವನ್ನು ವಿವರಿಸಿರಿ.

ಇ) ಒಂದಕ್ಕೆ ಉತ್ತರಿಸಿರಿ : (1x5=5)

1) 'ಪುಟ್ಟಗುಬ್ಬಿ ಕೇಳಿದ ದೊಡ್ಡ ಪ್ರಶ್ನೆ' ಪ್ರಬಂಧದ ಸ್ವಾರಸ್ಯವನ್ನು ವಿವರಿಸಿರಿ.

2) ನಿರೂಪಕರು ಆಗಂತುಕ ಮುದುಕನಿಂದ ಗ್ಯಾಸ್ ಸ್ಟೌವ್ ನೆವದಲ್ಲಿ ಮೋಸ ಹೋದ ಬಗೆ ಹೇಗೆ ? ವಿವರಿಸಿರಿ.

V. ಯಾವುದಾದರೂ ಒಂದಕ್ಕೆ ಟಿಪ್ಪಣಿ ಬರೆಯಿರಿ : (1x5=5)

1) ಮಾನವೀಯ ಸಂಬಂಧವು ವ್ಯಾಪಾರೀ ಜಗತ್ತಿನಲ್ಲಿ ಶಿಥಿಲವಾಗುತ್ತಿರುವ ಬಗೆಯನ್ನು ಚಿತ್ರಿಸಿರಿ.

2) ಆರ್ಥಿಕಾಭಿವೃದ್ಧಿಯ ಹೆಸರಿನಲ್ಲಿ ಪ್ರಾಕೃತಿಕ ಸಮತೋಲನವನ್ನು ತಪ್ಪಿಸುವ ವೈಜ್ಞಾನಿಕ ಕ್ರಾಂತಿ.

3) ಶಬ್ದ ಮಾಲಿನ್ಯ ಹಾಗೂ ಆರೋಗ್ಯ ಕುರಿತು ವಿವರಿಸಿರಿ.

VI. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) ಪ್ರಭು ಸಮ್ಮಿತ ಎಂಬ ನಾ. ಮೊಗಸಾಲೆಯವರ ಕಥೆಯನ್ನು ಯಾವ ಸಂಕಲನದಿಂದ ಆರಿಸಲಾಗಿದೆ ?

2) ಪೀಟರ್ ಯಾವ ದೇಶದವನು ?

3) ವಿ.ಸೀ. ಯವರ ಜನ್ಮಸ್ಥಳ ಯಾವುದು ?

4) ಔಟ್‌ಹೌಸಿಗೆ ಕೆ. ಎಸ್.ನ. ಅವರು ಬಳಸಿದ ಸಂವಾದಿ ಪದ ಯಾವುದು ?

## ಭಾಗ - ೩
## ಕ್ರಿಯಾತ್ಮಕ ಕನ್ನಡ

VII. ಒಂದಕ್ಕೆ ಉತ್ತರಿಸಿರಿ : (1×8=8)

1) ಜಾಹೀರಾತು ಎಂದರೇನು ? ಸ್ವರೂಪ ಮತ್ತು ಉದ್ದೇಶವನ್ನು ವಿವರಿಸಿರಿ.

2) ಮಾರುಕಟ್ಟೆ ನಿರ್ವಹಣೆಯಲ್ಲಿ ಜಾಹೀರಾತುಗಳ ಪಾತ್ರವನ್ನು ವಿವರಿಸಿರಿ.

VIII. ಒಂದಕ್ಕೆ ಉತ್ತರಿಸಿರಿ : (1×5=5)

1) ಕಾಲೇಜಿನ ಕ್ರೀಡಾ ದಿನಾಚರಣೆಯ ಆಮಂತ್ರಣ ಪತ್ರಿಕೆಯನ್ನು ರಚಿಸಿರಿ.

2) ಸರಕಾರಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಅಭ್ಯರ್ಥನ ಪತ್ರವನ್ನು ರಚಿಸಿರಿ.

IX. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಬೂಸ್ಟ್ ಇದರ ಘೋಷವಾಕ್ಯವನ್ನು ಬರೆಯಿರಿ.

2) ಪತ್ರಿಕೆಗಳ ಮುಖ್ಯ ಆದಾಯದ ಮೂಲ ಯಾವುದು ?